# ‘ಚಕ್ರವರ್ತಿ’ ಪಟ್ಟಾಭಿಷೇಕಕ್ಕೆ ಭರದ ತಯಾರಿ

ದರ್ಶನ್ ಅಭಿನಯದ ‘ಚಕ್ರವರ್ತಿ’ ತೆರೆಕಾಣಲು ಸಜ್ಜಾಗಿರುವ ಸಿನಿಮಾ. ಭೂಗತಲೋಕದ ಡಾನ್ ಪಾತ್ರದಲ್ಲಿ ದರ್ಶನ್ ನಟಿಸಿರುವ ಈ ಸಿನಿಮಾ, ಅದ್ದೂರಿತನದಿಂದಲೂ ಕುತೂಹಲ ಕೆರಳಿಸಿದೆ.

‘ಚಕ್ರವರ್ತಿ’ ಚಿತ್ರದ ನಿರೀಕ್ಷೆ ದಿನದಿಂದ ದಿನಕ್ಕೆ ನಿಧಾನಕ್ಕೆ ಜ್ವರದಂತೆ ಗಾಂಧಿನಗರವನ್ನು ಆವರಿಸಿಕೊಳ್ಳುತ್ತಿದೆ. 2017ರ ಬಹು ನಿರೀಕ್ಷಿತ ಚಿತ್ರಗಳಲ್ಲಿ ಇದೂ ಒಂದು. ‘ಜಗ್ಗೂದಾದ’ ಚಿತ್ರದ ಯಶಸ್ಸಿನ ನಂತರ ತೆರೆ ಕಾಣಲು ಸಜ್ಜಾಗಿರುವ ‘ಚಕ್ರವರ್ತಿ’, ದರ್ಶನ್‌ಗೆ ಬಹುದೊಡ್ಡ ಗೆಲುವನ್ನು ತಂದುಕೊಡಲಿದೆ ಎನ್ನುವುದು ಅಭಿಮಾನಿಗಳ ನಿರೀಕ್ಷೆ.

‘ಚಕ್ರವರ್ತಿ’ ದರ್ಶನ್ ಶೈಲಿಯ ಎಲ್ಲ ಸೂತ್ರಗಳನ್ನು ಒಳಗೊಂಡಿರುವ ಸಿನಿಮಾ. ಪ್ರೇಮ, ಸಾಹಸ, ಹಾಸ್ಯ – ಎಲ್ಲವೂ ಹದವಾಗಿ ಬೆರೆತಿದೆ ಎನ್ನಲಾದ ಈ ಚಿತ್ರದಲ್ಲಿ ಭೂಗತ ಜಗತ್ತಿನ ಡಾನ್ ಪಾತ್ರದಲ್ಲಿ ದರ್ಶನ್ ಕಾಣಿಸಿಕೊಂಡಿದ್ದಾರೆ. ದರ್ಶನ್ ಜೊತೆಗೆ ಅವರ ಸಹೋದರ, ನಿರ್ದೇಶಕ ತೂಗುದೀಪ್ ದಿನಕರ್ ಕೂಡ ತಾರಾಗಣದಲ್ಲಿದ್ದಾರೆ. ದೀಪಾ ಸನ್ನಿಧಿ ಚಿತ್ರದ ನಾಯಕಿ. ದರ್ಶನ್‌ರ ‘ಸಾರಥಿ’ ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದವರು ದೀಪಾ. ಪ್ರತಿಭೆ ಹಾಗೂ ಗ್ಲಾಮರ್ – ಎರಡು ಕಾರಣಗಳಿಂದಲೂ ಚಿತ್ರರಸಿಕರ ಗಮನಸೆಳೆದಿದ್ದ ಅವರು, ಇತ್ತೀಚಿನ ದಿನಗಳಲ್ಲಿ ನಾಪತ್ತೆಯಾಗಿದ್ದರು. ದರ್ಶನ್ ಚಿತ್ರದ ಮೂಲಕವೇ ಮತ್ತೆ ಪ್ರೇಕ್ಷಕರ ಎದುರು ಬರುತ್ತಿರುವ ದೀಪಾ ಅವರಿಗೆ ‘ಚಕ್ರವರ್ತಿ’ ಎರಡನೇ ಇನಿಂಗ್ಸ್!

ದರ್ಶನ್‌ರ ಗೆಳೆಯ ಎ.ವಿ. ಚಿಂತನ್ ‘ಚಕ್ರವರ್ತಿ’ ಚಿತ್ರದ ನಿರ್ದೇಶಕ. ಕೆಲವು ವರ್ಷಗಳ ಹಿಂದೆಯೇ ಚಿಂತನ್ ಹೇಳಿದ ಕಥೆ ದರ್ಶನ್ ಅವರಿಗೆ ಹಿಡಿಸಿತ್ತು. ಆದರೆ, ನಿರ್ಮಾಪಕರು ಕೂಡಿಬರದೆ ಪ್ರಾಜೆಕ್ಟ್ ಮುಂದಕ್ಕೆ ಹೋಗುತ್ತಾ ಬಂತು. ಕೊನೆಗೆ ‘ಎಕೆ 56’ ಚಿತ್ರದ ನಟ ಸಿದ್ಧಾಂತ್ ಹಾಗೂ ಅಣಜಿ ನಾಗರಾಜ್ ನಿರ್ಮಾಪಕರ ಪಾತ್ರ ನಿರ್ವಹಿಸಲು ಮುಂದಾದರು. ಬಂಡವಾಳ ಹೂಡಿಕೆಯ ಜೊತೆಗೆ ಚಿತ್ರದ ಮುಖ್ಯ ಪಾತ್ರವೊಂದರಲ್ಲಿ ಸಿದ್ಧಾಂತ್ ನಟಿಸಿದ್ದಾರೆ ಕೂಡ.

ಮೂರು ವಿಭಿನ್ನ ಗೆಟಪ್‌ಗಳಲ್ಲಿ ದರ್ಶನ್ ಕಾಣಿಸಿಕೊಂಡಿರುವುದು ‘ಚಕ್ರವರ್ತಿ’ಯ ಪ್ರಮುಖ ವಿಶೇಷ. ಪಾತ್ರದಲ್ಲಿನ ಬದಲಾವಣೆಗಳಿಗಾಗಿ ಅವರು ತೂಕವನ್ನು ಹೆಚ್ಚಿಸಿಕೊಳ್ಳುವುದೂ ಇಳಿಸಿಕೊಳ್ಳುವುದೂ ನಡೆದಿದೆ. ಹೀಗೆ, ದೇಹಾಕಾರದ ಬದಲಾವಣೆಗೆ ಹಿಡಿದ ಸಮಯ ಕೂಡ ಚಿತ್ರದ ಮೇಕಿಂಗ್ ದೀರ್ಘವಾಗಲು ಕಾರಣವಾಗಿದೆ. ಈ ಚಿತ್ರಕ್ಕಾಗಿ ದರ್ಶನ್ ಸಾಕಷ್ಟು ಬೆವರು ಸುರಿಸಿದ್ದಾರೆ, ತಾಳ್ಮೆಯನ್ನೂ ವಹಿಸಿದ್ದಾರೆ.

ಸುಮಾರು 120 ದಿನಗಳ ಕಾಲ ಚಿತ್ರೀಕರಣ ನಡೆದಿರುವ ‘ಚಕ್ರವರ್ತಿ’ ಅದ್ದೂರಿತನದಿಂದಲೂ ಸುದ್ದಿ ಮಾಡುತ್ತಿದೆ. ಹಡಗು, ಹೆಲಿಕಾಪ್ಟರ್‌ಗಳನ್ನು ಬಳಸಿ ಶೂಟಿಂಗ್ ನಡೆಸಲಾಗಿದೆ. ಸಿನಿಮಾದಲ್ಲಿ ಚೇಸಿಂಗ್ ದೃಶ್ಯವೊಂದು ಪ್ರೇಕ್ಷಕರನ್ನು ಕುರ್ಚಿಯ ತುದಿಯಲ್ಲಿ ಕೂರಿಸುವಷ್ಟು ರೋಚಕವಾಗಿದೆಯಂತೆ.

ವರ್ತಮಾನದೊಂದಿಗೆ ಎಪ್ಪತ್ತು – ಎಂಬತ್ತರ ದಶಕದ ಮರುಸೃಷ್ಟಿಯೂ ‘ಚಕ್ರವರ್ತಿ’ ಸಿನಿಮಾದಲ್ಲಿ ನಡೆದಿದೆ. ಸಾಹಸ ದೃಶ್ಯಗಳ ಸಂಯೋಜನೆಯಲ್ಲಿಯೂ ಅಂದಿನ ಕಾಲಘಟ್ಟವನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಕರ್ನಾಟಕದ ಜೊತೆಗೆ ಸಿಂಗಪುರ, ಮಲೇಷಿಯಾಗಳ ಮೋಹಕ ಹೊರಾಂಗಣದಲ್ಲೂ ಚಿತ್ರೀಕರಣ ನಡೆಸಿದೆ.

ತಾರಾಗಣದ ದೃಷ್ಟಿಯಿಂದಲೂ ನಿರ್ದೇಶಕ ಚಿಂತನ್‌ರ ಆಯ್ಕೆ ಗಮನಸೆಳೆಯುವಂತಿದೆ. ಬಹು ದಿನಗಳ ನಂತರ ‘ಚಕ್ರವರ್ತಿ’ಗಾಗಿ ಕುಮಾರ್ ಬಂಗಾರಪ್ಪ ಬಣ್ಣ ಹಚ್ಚಿಕೊಂಡಿದ್ದಾರೆ. ಸೃಜನ್ ಲೋಕೇಶ್, ಆದಿತ್ಯ, ಶರತ್ ಲೋಹಿತಾಶ್ವ, ಹರೀಶ್ ರೈ – ಹೀಗೆ ತಾರೆಗಳ ಸಂಗಮವೇ ಚಿತ್ರದಲ್ಲಿದೆ. ತಾರಾಗಣ ಹಾಗೂ ತಂತ್ರಜ್ಞರ ಪಟ್ಟಿ ನೋಡಿದರೆ, ಇದನ್ನು ‘ಗೆಳೆಯರ ಸಿನಿಮಾ’ ಎಂದೂ ಕರೆಯಬಹುದು.

ಇತ್ತೀಚೆಗಷ್ಟೇ ‘ಚಕ್ರವರ್ತಿ’ಯ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಯಾಗಿದೆ. ಫೆಬ್ರುವರಿ ಕೊನೆಯಲ್ಲಿ ಅಥವಾ ಮಾರ್ಚ್ ತಿಂಗಳಲ್ಲಿ ಸಿನಿಮಾ ತೆರೆಕಾಣಲಿದೆ.

■ ರಘು

